## ನಿಮ್ಮೊಡನೆ

# ಇಷ್ಟೊಂದು ರಜೆಗಳು ಬೇಕೆ?

ಮಹಾಪುರುಷರ ಜಯಂತಿಗಳ ಆಚರಣೆಯಿಂದ ರಾಜಕೀಯ ಪಕ್ಷಗಳಿಗೆ ಲಾಭ ಆಗಬಹುದು. ಇದರಿಂದ ಜಾತಿ, ಧರ್ಮಗಳನ್ನು ಮೀರಿ ನಿಂತ, ಇಡೀ ಮನುಕುಲಕ್ಕೆ ಆದರ್ಶಪ್ರಾಯರಾದ ಮಹಾ ಪುರುಷರನ್ನು ಜಾತಿ ಆಧಾರದ ಮೇಲೆ ನೋಡುವ ಸಂಕುಚಿತ ದೃಷ್ಟಿಕೋನ ಬೆಳೆಯಲು ಕಾರಣವಾಗುತ್ತದೆ ಎಂಬ ಅರಿವು ಸರ್ಕಾರಕ್ಕೆ ಇಲ್ಲ.

ಸಂಘಟಿತ ವಲಯದ ಸಿಬ್ಬಂದಿಗೆ ವೇತನಸಹಿತ ರಜೆ ನೀಡುವ ವ್ಯವಸ್ಥೆ ಬ್ರಿಟಿಷರ ಆಡಳಿತದ ಬಳುವಳಿ. ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರಿಗೆ ರಜೆ ಸೌಲಭ್ಯ ಹೆಚ್ಚು. ಶಾಲಾ, ಕಾಲೇಜುಗಳ ಶಿಕ್ಷಕರಿಗೆ ಇನ್ನೂ ಹೆಚ್ಚು. ಮಹಿಳಾ ನೌಕರರಿಗೆ ವಿಶೇಷ ರಜೆಯ ಸೌಲಭ್ಯ. ಒಟ್ಟಾರೆ ಸರ್ಕಾರಿ ನೌಕರರಿಗೆ ರಜೆಗಳನ್ನು ಅನುಭವಿಸುವ ವಿಫುಲ ಅವಕಾಶ. ವಾರಾಂತ್ಯದ ಒಂದು ದಿನ ಎಲ್ಲ ಕೆಲಸ, ಕಾರ್ಯಗಳಿಗೆ ಬಿಡುವು ನೀಡಿ ವಾರದ ದುಡಿಮೆಯ ದಣಿವನ್ನು ನೀಗಿಕೊಳ್ಳುವುದು ರಜೆಯ ಉದ್ದೇಶ. ವಾರದ ರಜೆ ಅಲ್ಲದೆ ರಾಷ್ಟ್ರೀಯ ಮತ್ತು ಧಾರ್ಮಿಕ ಹಬ್ಬಗಳ ಆಚರಣೆ ಹೆಸರಿನಲ್ಲಿ ರಜೆ ನೀಡುವ ಪದ್ಧತಿ ನಮ್ಮಲ್ಲಿದೆ. ಇವು ವೇತನಸಹಿತ ರಜೆಗಳು. ರಜೆ ಎಂದರೆ ಸಂಘಟಿತ ವಲಯಗಳ ಸಿಬ್ಬಂದಿಗೆ ಎಲ್ಲಿಲ್ಲದ ಖುಷಿ. ಸಾರ್ವತ್ರಿಕ ರಜೆಗಳಲ್ಲದೆ ಹಕ್ಕಿನ, ವೈದ್ಯಕೀಯ ಮತ್ತಿತರ ರಜೆಗಳನ್ನು ಅನುಭವಿಸುವ ಅವಕಾಶವಿದೆ.

ಸಾರ್ವತ್ರಿಕ ರಜೆಗಳಲ್ಲದೆ ರಾಷ್ಟ್ರೀಯ ನಾಯಕರ ಸಾವು, ನೈಸರ್ಗಿಕ ವಿಪತ್ತುಗಳು, ಬಂದ್, ಚಳವಳಿ, ಎರಡನೇ ಶನಿವಾರ ಇತ್ಯಾದಿ ಸಂದರ್ಭಗಳಲ್ಲಿ ರಜೆ ನೀಡುವ ವ್ಯವಸ್ಥೆ ನಮ್ಮ ದೇಶದಲ್ಲಿದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ಸಾರ್ವತ್ರಿಕ ರಜೆಗಳಲ್ಲದೆ ವಿಶಿಷ್ಟ ಸಂದರ್ಭಗಳಲ್ಲಿ ತನ್ನ ಸಿಬ್ಬಂದಿಗೆ ರಜೆ ನೀಡುವ ಅಧಿಕಾರ ರಾಜ್ಯ ಸರ್ಕಾರಕ್ಕಿದೆ. ನಮ್ಮದು ಧರ್ಮನಿರಪೇಕ್ಷ ಹಾಗೂ ಜಾತ್ಯತೀತ ದೇಶ. ಧಾರ್ಮಿಕ ಬಹುಸಂಖ್ಯಾತರು ಹಾಗೂ ಅಲ್ಪ ಸಂಖ್ಯಾತರ ಹಬ್ಬಗಳ ಸಂದರ್ಭದಲ್ಲಿ ರಜೆ ನೀಡುವ ವ್ಯವಸ್ಥೆಯಿಂದಾಗಿ ಹಬ್ಬ ಆಚರಿಸದವರಿಗೂ ಅನಾಯಾಸ ರಜೆ ಸಿಗುತ್ತದೆ. ರಜೆ ಎಂದರೆ ಅದು ಪೂರ್ಣ ವಿರಾಮದ ದಿನ. ರಜೆಗಳ ಸಂಖ್ಯೆ ಹೆಚ್ಚಾದಷ್ಟೂ ಸರ್ಕಾರಕ್ಕೆ ನಷ್ಟ. ಅಸಂಘಟಿತ ವಲಯದಲ್ಲಿ ಬರುವ ರೈತರು, ಹಾಗೂ ಇನ್ನಿತರ ಶ್ರಮಜೀವಿಗಳಿಗೆ ರಜೆಗಳೇ ಇಲ್ಲ. ಆಯಾ ದಿನದ ಅನ್ನವನ್ನು ದುಡಿದೇ ಗಳಿಸುವ ಅನಿವಾರ್ಯತೆ ಇರುವವರಿಗೆ ಅರ್ಧ ತಾಸಿನ ವಿರಾಮವೂ ದುಬಾರಿ.

ರಜೆ ಹೆಚ್ಚಾದಷ್ಟು ಮಾನವ ಶಕ್ತಿ ಅಪವ್ಯಯವಾಗುತ್ತದೆ. ದುಡಿಮೆಯ ದಿನಗಳು ಕಡಿಮೆಯಾದರೆ ಒಟ್ಟಾರೆ ದೇಶದ ಉತ್ಪಾದನೆ ಕುಸಿಯುತ್ತದೆ. ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಪಕ್ಷಗಳು ವೋಟ್ ಬ್ಯಾಂಕ್ ರಾಜಕಾರಣ ಮಾಡುತ್ತಿವೆ. ಜಾತಿ, ಸಮುದಾಯಗಳ ಜನರನ್ನು ಓಲೈಸುತ್ತಿವೆ. ಬಹು ಸಂಖ್ಯಾತ ಜಾತಿಗಳ ಜನರ ಮತಗಳನ್ನು ಪಡೆಯುವ ಸಲುವಾಗಿ ಆ ಜಾತಿಯಲ್ಲಿ ಹುಟ್ಟಿ ಇಡೀ ಮನುಕುಲಕ್ಕೆ ಮಾರ್ಗದರ್ಶಕರಾಗಿ ಬೆಳೆದ ಮಹನೀಯರ ಜನ್ಮ ದಿನವನ್ನು ಆಚರಿಸಲು ಮುಂದಾಗಿವೆ. ಅಂದು ರಜೆ ಘೋಷಿಸಿ ಸರ್ಕಾರವೇ ತನ್ನ ಖರ್ಚಿನಲ್ಲಿ ಜನ್ಮ ದಿನ ಆಚರಿಸುತ್ತದೆ. ಅಂದು ಉಳಿದೆಲ್ಲ ಜಾತಿಗಳ, ಧರ್ಮಗಳ ಜನರಿಗೂ ರಜೆ. ಇಂತಹ ರಜೆಗಳ ಅಗತ್ಯ ಇದೆಯೇ?

ಮಹಾಪುರುಷರ ಜಯಂತಿಗಳ ಆಚರಣೆಯಿಂದ ರಾಜಕೀಯ ಪಕ್ಷಗಳಿಗೆ ಲಾಭ ಆಗಬಹುದು. ಇದರಿಂದ ಜಾತಿ, ಧರ್ಮಗಳನ್ನು ಮೀರಿ ನಿಂತ, ಇಡೀ ಮನುಕುಲಕ್ಕೆ ಆದರ್ಶಪ್ರಾಯರಾದ ಮಹಾ ಪುರುಷರನ್ನು ಜಾತಿ ಆಧಾರದ ಮೇಲೆ ನೋಡುವ ಸಂಕುಚಿತ ದೃಷ್ಟಿಕೋನ ಬೆಳೆಯಲು ಕಾರಣವಾಗುತ್ತದೆ ಎಂಬ ಅರಿವು ಸರ್ಕಾರಕ್ಕೆ ಇಲ್ಲ. ಈಗ ಪ್ರತಿಯೊಂದು ಜಾತಿಯೂ ಸಂಘಟಿತವಾಗಿದೆ. ಆಯಾ ಜಾತಿಯಲ್ಲಿ ಹುಟ್ಟಿದ ಮಹಾ ಪುರುಷರಾದವರ ಜಯಂತಿಯ ಸರ್ಕಾರಿ ಆಚರಣೆಗೆ ಪೈಪೋಟಿ ನಡೆಯುತ್ತಿದೆ. ಅಂದು ಸರ್ಕಾರ ರಜೆ ಘೋಷಣೆ ಮಾಡಬೇಕು ಎಂಬುದು ಎಲ್ಲ ಜಾತಿಗಳ ಬೇಡಿಕೆ. ದುಡಿಮೆಯ ಮೂಲಕ ದೇವರನ್ನು ಕಾಣಬೇಕು ಎಂಬ ಆದರ್ಶವನ್ನು ಜೀವನದ ಉದ್ದಕ್ಕೂ ಪಾಲಿಸಿದ ಮಹಾನುಭಾವನ ಜಯಂತಿಯಂದು ರಜೆ ನೀಡುವುದು ವಿಪರ್ಯಾಸವಲ್ಲವೇ? ಅಂದು ಪ್ರತಿಯೊಬ್ಬರೂ ಹೆಚ್ಚು ದುಡಿದು ಆ ಮಹಾ ವ್ಯಕ್ತಿಗೆ ಗೌರವ ಸಲ್ಲಿಸಬೇಕು ಎಂಬುದನ್ನು ಎಲ್ಲರೂ ಮರೆತಿದ್ದಾರೆ.

ಮಹಾಪುರುಷ ಜನ್ಮ ದಿನ ಆಚರಣೆ, ಮೂರ್ತಿ ಪ್ರತಿಷ್ಠಾಪನೆ, 'ಪೀಠ', ಪ್ರಶಸ್ತಿ ಸ್ಥಾಪನೆ ಇತ್ಯಾದಿಗಳನ್ನು ರಾಜಕೀಯ ಲಾಭಕ್ಕಾಗಿ ಮಾಡುವ ಕಸರತ್ತುಗಳನ್ನು ರಾಜಕೀಯ ಪಕ್ಷಗಳು ಕೈಬಿಡಬೇಕು. ಜಯಂತಿ ಆಚರಣೆ ಹೆಸರಿನಲ್ಲಿ ಮಾನವ ಶಕ್ತಿಯ ಅಪವ್ಯಯಕ್ಕೆ ಅವಕಾಶ ಕೊಡಬಾರದು. ಜಾತಿ, ಧರ್ಮಗಳನ್ನು ಮೀರಿ ನಿಂತಹ ಮಹಾಪುರುಷರನ್ನು ವ್ಯಕ್ತಿತ್ವವನ್ನು ಮಿತಿಗೊಳಿಸುವ ಪ್ರಯತ್ನಗಳೂ ಬೇಡ. ಎಲ್ಲಾ ಮಹಾ ಪುರುಷರು ಎಲ್ಲರಿಗೂ ಎಲ್ಲ ಕಾಲಕ್ಕೂ ಮಹಾ ಪುರುಷರೇ ಆಗಿರಲಿ.



■ ಪ್ರೇಮಕುಮಾರ್ ಹರಿಯಬ್ಬೆ